### ಸರ್ಕಾರದ ಸಹಾಯಧನ ಬಳಸಿಕೊಳ್ಳಿ | ಗೇರು ಬೆಳೆಗಾರರ ಸಂಘದ ದೇವಿಪ್ರಸಾದ್ ಕಲ್ಲಾಜೆ ಸಲಹೆ

# ಬೆಳೆಗಳ ಸಂಸ್ಕರಣೆ, ಮಾರುಕಟ್ಟೆ ಅರಿಯಿರಿ

■ ವಿಜಯವಾಣಿ ಸುದ್ದಿಜಾಲ ತ್ಯಾಗರ್ತಿ

ರೈತರು ತಾವು ಬೆಳೆದ ಬೆಳೆಗಳ ಸಂಸ್ಕರಣೆ ಮತ್ತು ಮಾರುಕಟ್ಟೆ ಅರಿತರೆ ಯಶಸ್ವಿಯಾಗಿ ರೈತಾಪಿ ಕ್ಷೇತ್ರದಲ್ಲಿ ಮುಂದುವರಿಯಬಹುದು ಎಂದು ಅಖಿಲ ಭಾರತ ಗೇರುಬೆಳೆಗಾರರ ಸಂಘ (ಅಭಾಗೇಬೆಸಂ)ದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ ಹೇಳಿದರು.

ಸಾಗರ ತಾಲೂಕು ನೀಚಡಿಯಲ್ಲಿ ರಾಷ್ಟ್ರೀಯ ಗೇರುಸಂಶೋಧನಾ ಕೇಂದ್ರ ಪುತ್ತೂರು, ನೀಚಡಿ ಟ್ರಸ್ಟ್, ಗೇರು ಮತ್ತು ಕೋಕೋ ನಿರ್ದೇಶನಾಲಯ ಕೊಚ್ಚಿ 2 ದಿನ ಆಯೋಜಿಸಿರುವ ಗೇರು ಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದರು.

ತೋಟಗಾರಿಕೆಗೆ ಸರ್ಕಾರ ಅನೇಕ ಸಹಾಯಧನ ನೀಡುತ್ತಿದ್ದು ಅದನ್ನು ಪಡೆದುಕೊಳ್ಳಲು ರೈತರಿಗೆ ಸೂಕ್ತ ಮಾಹಿತಿಗಳು ಇಂತಹ ಕಾರ್ಯಾಗಾರಗಳಿಂದ ಲಭ್ಯವಾಗುತ್ತವೆ ಹಾಗೂ ವಿವಿಧ ಭಾಗದ ರೈತರ, ವಿಜ್ಞಾನಿಗಳ ನಡುವೆ ಉತ್ತಮ ಬಾಂಧವ್ಯ ಸಾಧ್ಯವಾಗುತ್ತದೆ. ನಮ್ಮ ಜಮೀನಿನಲ್ಲಿ ಬೆಳೆದ ಹಣ್ಣು, ಗೋಡಂಬಿ ಸಂಸ್ಕರಣೆ ಮಾಡುವ ವಿಧಾನವನ್ನು ತಿಳಿದುಕೊಂಡಿರಬೇಕು ಕಾರ್ಖಾನೆಗಳು ಮತ್ತು ರೈತರ ನಡುವೆ ಅಂತರ ಇದ್ದು ಕಡಿಮೆ ಮಾಡಲು ರೈತರು ಸಂಘಟಿತರಾಗಬೇಕು. ರೈತರು ಬೆಳೆದ ಉತ್ಪನ್ನಗಳಿಗೆ ಬೆಂಬಲ ಬೆಲೆಸಿಗಬೇಕು ಎಂದು ಹೇಳಿದರು.



ನೀಚಡಿಯಲ್ಲಿ ಆಯೋಜಿಸಿದ್ದ ಗೇರು ಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರದಲ್ಲಿ ಡಾ. ಮೋಹನ್ ತಲಕಾಲಕೊಪ್ಪ ಮಾತನಾಡಿದರು. ಚಂದ್ರಶೇಖರ್ ತುಮರಿ, ಡಾ. ಎಂ.ಜಿ.ನಾಯಕ್, ದೇವಿಪ್ರಸಾದ್ ಕಲ್ಲಾಜೆ ಇದ್ದರು.

ಗೇರುಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಎಂ.ಜಿ.ನಾಯಕ್ ಮಾತನಾಡಿ, ರೈತರೂ ಆಧುನಿಕತೆಗೆ ಹೊಂದಿಕೊಳ್ಳಲು ಕೃಷಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಕಳೆದ 3 ವರ್ಷಗಳಿಂದ ಗೇರು ತಳಿಗಳಲ್ಲಿ ಹಾಗೂ ಬೇಸಾಯ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು ಶ್ರಮದ ಬೆಳೆಗಳ ಸಂಪೂರ್ಣ ಲಾಭ ರೈತರಿಗೆ ಸಿಗಬೇಕು. ಈ ನಿಟ್ಟಿನಲ್ಲಿ ರೈತರು ಸಂಘಟನಾತ್ಮಕವಾಗಿ ಚಟುವಟಿಕೆಯಲ್ಲಿರಬೇಕು ಎಂದು ಹೇಳಿದರು.

> ಬಂಜರು ಭೂಮಿಯಲ್ಲಿ ಗೋಡಂಬಿ ಬೆಳೆ ಬೆಳೆಯುವುದು ಉತ್ತಮ ವಿಧಾನವಾಗಿದ್ದು ನೀರಿಲ್ಲದ ಒಣ ಭೂಮಿಗಳಲ್ಲೂ ರೈತರು ಉತ್ತಮ ಆದಾಯ ಪಡೆಯಬಹುದಾಗಿದೆ.
>
> **|ಚಂದ್ರಶೇಖರ್ ತುಮರಿ** ಗೇರು ಕೃಷಿಕ

ಗೇರುಸಂಶೋಧನಾ ಕೇಂದ್ರದ ವಿಜ್ಞಾನಿ ಡಾ. ಮೋಹನ್ ತಲಕಾಲಕೊಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಸಾಗರ ತಾಲೂಕಿನ ನೀಚಡಿ, ಉಳ್ಳೂರು, ತ್ಯಾಗರ್ತಿ, ಹೊಸಂತೆ , ನಂದೀತಳೆ ಗ್ರಾಮಗಳಲ್ಲಿ ವ್ಯವಸ್ಥಿತ ಗೇರು ಕೃಷಿಯ ಅತೀಸಾಂದ್ರದ ಪದ್ಧತಿಯ ಗೇರು ಬೇಸಾಯವನ್ನು ನಡೆಸಲಾಗುತ್ತಿದ್ದು ಎರಡೇ ವರ್ಷದಲ್ಲಿ ಅತಿಹೆಚ್ಚು ಇಳುವರಿ ಗೇರು ಕೃಷಿಯಲ್ಲಿ ಕಂಡುಬಂದಿದೆ. ಇದರಲ್ಲಿ ಗಿಡನೆಟ್ಟು 8 ತಿಂಗಳಿಗೆ ಬೆಳೆ ಬಂದಿರುವುದು ಇಲ್ಲಿನ ಕೃಷಿಕರಲ್ಲಿ ಅಚ್ಚರಿ ಮೂಡಿಸಿದೆ ಎಂದು ಹೇಳಿದರು.

ತರಬೇತಿಯಲ್ಲಿ ಗೇರು ತಳಿಗಳು ಮತ್ತು ತೋಟದ ನಿರ್ವಹಣೆ, ಪೋಷಕಾಂಶಗಳ ನಿರ್ವಹಣೆ ಗೇರಿನಲ್ಲಿ ಕೀಟ ಹಾಗೂ ರೋಗ ನಿರ್ವಹಣೆ ಕುರಿತು ಉಪನ್ಯಾಸ ನೀಡಲಾಯಿತು. ನೀಚಡಿ ಟ್ರಸ್ಟ್ ಅಧ್ಯಕ್ಷ ಶ್ರೀನಾಥ್ ನಾಡಿಗ್, ಹಿರಿಯ ಗೇರು ಕೃಷಿಕರಾದ ಚಂದ್ರಶೇಖರ್ ತುಮರಿ, ಶುಂಠಿ ಮಂಜುನಾಥ್, ಸುಬ್ರಹ್ಮಣ್ಯ ನೀಚಡಿ ಇತರರಿದ್ದರು.

ಉಮೇಶ ಬಾಯರಿ ಅವರ ಮೇಲೆ ರಮೇಶ ಕೊಂಬಕೊಡಿಗೆ, ಸುನಿಲ್ ಮಲ್ಲಿಗೆಮನೆ ಎಂಬುವರು ಹಲ್ಲೆ ನಡೆಸಿದ್ದಾರೆ.

# ಗೇರು ಉತ್ಪನ್ನದಿಂದ ಸ್ವಯಂ ಉದ್ಯೋಗ ಸೃಷ್ಟಿ

ತ್ಯಾಗರ್ತಿ: ಗೇರು ಉತ್ಪನ್ನದಿಂದ ಯುವಕರು ಸ್ವಯಂ ಉದ್ಯೋಗವನ್ನು ಸೃಷ್ಟಿಸಿಕೊಳ್ಳಬಹುದು ಎಂದು ಗೇರು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಎಂ.ಜಿ. ನಾಯಕ್ ಹೇಳಿದರು. ನೀಚಡಿಯಲ್ಲಿ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ ಪುತ್ತೂರು, ಗೇರು ಮತ್ತು ಕೋಕೋ ನಿರ್ದೇಶನಾಲಯ ಕೊಚ್ಚಿನ್ ಹಾಗೂ ನೀಚಡಿ ಟ್ರಸ್ಟ್ ಇವುಗಳ ಸಹಯೋಗದಲ್ಲಿ ಗೇರು ಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರದ ಸಮಾರೋಪದಲ್ಲಿ ಅವರು ಮಾತನಾಡಿದರು.

ವಿವಿಧ ಬಗೆಯ ಗೇರು ತಳಿಗಳ ಅಭಿವೃದ್ಧಿಯ ಸಂಶೋಧನೆ ನಡೆಯುತ್ತಿದ್ದು ಈ ಸಂಶೋಧನೆಯಲ್ಲಿ ಯಶಸ್ವಿಯಾದರೆ ಕಡಿಮೆ ವೆಚ್ಚದಲ್ಲಿ ಹೆಚ್ಚು ಇಳುವರಿ ನೀಡುವ ಗೇರು ತಳಿಗಳನ್ನು ರೈತರಿಗೆ ನೀಡಲಾಗುವುದು ಎಂದು ಹೇಳಿದರು.

ಪ್ರಗತಿಪರ ಕೃಷಿಕ ಉಳ್ಳೂರು ಚಂದ್ರಶೇಖರ್ ಮಾತನಾಡಿ, ಗೇರು ತಳಿಗೆ ಶಾಪವೆಂಬಂತೆ ಹೂ ಬರುವ ಸಮಯದಲ್ಲಿ ಇಬ್ಬನಿ ಹೆಚ್ಚಾಗಿ ಹೂಗಳು ಕರಟಿಹೋಗಿ ಇಳುವರಿ ಕಡಿಮೆಯಾಗುತ್ತದೆ. ಇದರಿಂದ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ರೈತರ ಸಂಕಷ್ಟಕ್ಕೆ ಸಹಕಾರಿಯಾಗುವಂತಹ ಗೇರು ತಳಿಗಳನ್ನು ಸಂಶೋಧನಾ ಕೇಂದ್ರಗಳಲ್ಲಿ ಅಭಿವೃದ್ಧಿಪಡಿಸಬೇಕು ಎಂದು ಹೇಳಿದರು.

ಹಿರೇಬಿಲಗುಂಜಿ ಗ್ರಾಮ ಪಂಚಾಯ್ತಿ ಸದಸ್ಯ ಹಾಗೂ ನೀಚಡಿ ಟ್ರಸ್ಟ್‌ನ ಅಧ್ಯಕ್ಷ ಶ್ರೀನಾಥ್ ನಾಡಿಗ್, ಗೇರು ಸಂಶೋಧನಾ ಕೇಂದ್ರದ ವಿಜ್ಞಾನಿ ಡಾ. ಮೋಹನ್ ತಲಕಾಲುಕೊಪ್ಪ,ಎನ್.ಹೆಚ್.ಮಂಜುನಾಥ್ ನೀಚಡಿ ಉಪಸ್ಥಿತರಿದ್ದರು.

# ಗೇರು ಉತ್ಪನ್ನದಿಂದ ಸ್ವಉದ್ಯೋಗ ಸಾಧ್ಯ

## ನೀಚಡಿಯಲ್ಲಿ ಗೇರು ಕೃಷಿ-ಸಂಸ್ಕರಣಾ ತರಬೇತಿಯಲ್ಲಿ ಡಾ.ಎಂ.ಜೆ.ನಾಯಕ್

• **ಕನ್ನಡಪ್ರಭ ವಾರ್ತೆ** ತ್ಯಾಗರ್ತಿ

ಗೇರು ಉತ್ಪನ್ನದಿಂದ ಯುವಕರು ಸ್ವಉದ್ಯೋಗವನ್ನು ಸೃಷ್ಟಿಸಿಕೊಳ್ಳಬಹುದು ಎಂದು ಗೇರು ಸಂಶೋಧನಾ ಕೇಂದ್ರ ನಿರ್ದೇಶಕರಾದ ಡಾ. ಎಂ.ಜೆ. ನಾಯಕ್ ಹೇಳಿದರು.

ಸಾಗರತಾಲೂಕಿನನೀಚಡಿಯಲ್ಲಿರಾಷ್ಟ್ರೀಯಗೇರುಸಂಶೋಧನಾ ಕೇಂದ್ರ ಪುತ್ತೂರು, ಗೇರು ಮತ್ತು ಕೋಕೋ ನಿರ್ದೇಶನಾಲಯ ಕೊಚ್ಚಿನ್ ಹಾಗೂ ನೀಚಡಿ ಟ್ರಸ್ಟ್ ಸಹಯೋಗದಲ್ಲಿ 2 ದಿನಗಳ ಗೇರು ಕೃಷಿಮತ್ತು ಸಂಸ್ಕರಣಾತರಬೇತಿ ಕಾರ್ಯಾಗಾರದಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿವಿಧ ಬಗೆಯ ಗೇರು ತಳಿಗಳ ಅಭಿವೃದ್ಧಿಯ ಸಂಶೋಧನೆ ನಡೆಯುತ್ತಿದೆ. ಈ ಸಂಶೋಧನೆಯಲ್ಲಿ ಯಶಸ್ವಿಯಾದರೆ ಕಡಿಮೆ ವೆಚ್ಚದಲ್ಲಿ ಹೆಚ್ಚು ಇಳುವರಿ ನೀಡುವ ಗೇರು ತಳಿಗಳನ್ನು ರೈತರಿಗೆ ನೀಡಲಾಗುವುದು ಎಂದು ಹೇಳಿದರು.

ಗೇರು ತಳಿಗೆ ಶಾಪ ಎಂಬಂತೆ ಹೂ ಬರುವ ಸಮಯದಲ್ಲಿ ಇಬ್ಬನಿ ಹೆಚ್ಚಾಗಿ ಹೂಗಳು ಕರಟಿಹೋಗಿ ಇಳುವರಿ ಕಡಿಮೆಯಾಗುತ್ತದೆ. ಇದರಿಂದರೈತರುನಷ್ಟಅನುಭವಿಸುತ್ತಿದ್ದಾರೆ. ಇಂತಹಸಂದರ್ಭಗಳಲ್ಲಿ ರೈತರ ಸಂಕಷ್ಟಕ್ಕೆ ಸಹಕಾರಿಯಾಗುವಂತಹ ಗೇರು ತಳಿಗಳನ್ನು ಸಂಶೋಧನಾ ಕೇಂದ್ರಗಳಲ್ಲಿ ಅಭಿವೃದ್ಧಿಪಡಿಸಬೇಕೆಂದು ಪ್ರಗತಿಪರ ಕೃಷಿಕ ಉಳ್ಳೂರು ಚಂದ್ರಶೇಖರ್ ಮನವಿ ಮಾಡಿದರು.

ಸಾಗರತಾಲೂಕಿನಆನಂದಪುರಸಮೀಪದಇರುವಕ್ಕಿಗ್ರಾಮದಲ್ಲಿ 780 ಎಕರೆ ಪ್ರದೇಶದಲ್ಲಿ ಕೃಷಿ ಸಂಶೋಧನಾ ಕೇಂದ್ರವು ಪ್ರಾರಂಭಗೊಳ್ಳುತ್ತಿದೆ. ಈ ಸಂಶೋಧನಾ ಕೇಂದ್ರದಲ್ಲಿ ಗೇರು ಬೆಳೆ ಸಂಶೋಧನಾ ಕೇಂದ್ರಕ್ಕೂ ಅವಕಾಶ ದೊರಕಿಸಿಕೊಟ್ಟರೆ ಜಿಲ್ಲೆಯ ರೈತರಿಗೆ ಸಹಕಾರಿ ಆಗುತ್ತದೆ ಎಂದು ಹಿರೇಬಿಲಗುಂಜಿ ಗ್ರಾಮ ಪಂಚಾಯಿತಿ ಸದಸ್ಯ ಹಾಗೂ ನೀಚಡಿ ಟ್ರಸ್ಟ್ ಅಧ್ಯಕ್ಷ ಶ್ರೀನಾಥ್ ನಾಡಿಗ್ ಹೇಳಿದರು.

ಬೆಳೆಗಾರರಿಗೆ ಸಹಕಾರಿಯಾಗುವಂತೆ ಗೇರು ತೋಟಗಳಿಗೆ ಭೇಟಿ ನೀಡಿ ಗಿಡಗಳ ನಾಟಿ, ಪಾಲನೆ, ಪೋಷಣೆ ಹಾಗೂ ರೋಗಗಳ ನಿಯಂತ್ರಣಗಳಬಗ್ಗೆಪ್ರಾತ್ಯಕ್ಷಿಕೆಗಳನ್ನುನೀಡಿದ್ದು, ಸ್ಥಳೀಯಹಾಗೂ ಸುತ್ತಮುತ್ತಲಿನಬೆಳೆಗಾರರುಉತ್ಸಾಹದಿಂದಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಈ ಪ್ರದೇಶಗಳಲ್ಲಿ ಅತಿ ಹೆಚ್ಚು ಗೇರುಬೆಳೆ ಬೆಳೆದು ರೈತರು ಆರ್ಥಿಕವಾಗಿ ಸದೃಢರಾಗಲಿ ಎಂದು ಗೇರು ಸಂಶೋಧನಾ ಕೇಂದ್ರದ ವಿಜ್ಞಾನಿ ಡಾ.ಮೋಹನ್ ತಲಕಾಲುಕೊಪ್ಪ ಹೇಳಿದರು.

ಸಮಾರಂಭದಲ್ಲಿ ಎನ್.ಎಚ್. ಮಂಜುನಾಥ್ ನೀಚಡಿ ಉಪಸ್ಥಿತರಿದ್ದರು. ಎನ್.ಪಿ.ಸುಬ್ರಮಣ್ಯ ಕಾರ್ಯಕ್ರಮವನ್ನು ನಿರೂಪಿಸಿದರು.



ನೀಚಡಿಯಲ್ಲಿ ನಡೆದ ಗೇರು ಮಾಹಿತಿ ಕಾರ್ಯಾಗಾರದಲ್ಲಿ ಗೇರು ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ.ಎಂ.ಜೆ.ನಾಯಕ್ ಮಾತನಾಡಿದರು.

# ರೈತರು ಬೆಳೆ ಸಂಸ್ಕರಣೆ ಕಲಿಯಬೇಕಿದೆ



ನಿಟ್ಟೆಯಲ್ಲಿ ನಡೆದ ಗೇರು ಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರವನ್ನು ದೇವಿಪ್ರಸಾದ್ ಕಲ್ಲಾಚೆ ಉದ್ಘಾಟಿಸಿದರು.

ಕಾರ್ಕಳ: ಬೆಳೆಯನ್ನು ಸಂಸ್ಕರಣೆ ಮತ್ತು ಮಾರಾಟ ಮಾಡುವುದನ್ನು ರೈತರು ಅರಿತರೆ ಯಶಸ್ವಿಯಾಗಿ ಕೃಷಿ ಕ್ಷೇತ್ರದಲ್ಲಿ ಮುಂದುವರಿಯಬಹುದು ಎಂದು ಅಖಿಲ ಭಾರತ ಗೇರುಬೆಳೆಗಾರರ ಸಂಘದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಚೆ ಹೇಳಿದರು.

ನಿಟ್ಟೆಯಲ್ಲಿ ಶುಕ್ರವಾರ ರಾಷ್ಟ್ರೀಯ ಗೇರುಸಂಶೋಧನಾ ಕೇಂದ್ರ ಪುತ್ತೂರು, ಗೇರು ಮತ್ತು ಕೋಕೋ ನಿರ್ದೇಶನಾಲಯ ಕೊಚ್ಚಿನ್ ಹಾಗೂ ನಿಟ್ಟೆ ಟ್ರಸ್ಟ್ ಇವರ ಸಹಯೋಗದಲ್ಲಿ ಗೇರುಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ತೋಟಗಾರಿಕೆಗೆ ಸರ್ಕಾರ ಅನೇಕ ಸಹಾಯಧನಗಳನ್ನು ನೀಡುತ್ತಿದ್ದು ಸೂಕ್ತ ಮಾಹಿತಿಗಳು ಇಂತಹ ಕಾರ್ಯಾಗಾರಗಳಿಂದ ದೊರಕುತ್ತದೆ. ಇದರಿಂದ ವಿವಿಧ ಭಾಗದ ರೈತರ ಹಾಗೂ ವಿಜ್ಞಾನಿಗಳ ನಡುವೆ ಉತ್ತಮ ಬಾಂಧವ್ಯ ಹೊಂದಿ ಮುಖ್ಯ ಜಮೀನಿನಲ್ಲಿ ಬೆಳೆದ ಹಣ್ಣು ಮತ್ತು ಗೋಡಂಬಿಗಳನ್ನು ಸಂಸ್ಕರಣೆ ಮಾಡುವ ವಿಧಾನವನ್ನು ತಿಳಿದುಕೊಳ್ಳಬಹುದಾಗಿದೆ. ಅಲ್ಲದೇ ರೈತರು ಬೆಳೆದ ಉತ್ಪನ್ನಗಳಿಗೆ ಸಮರ್ಪಕ ಬೆಲೆ ದೊರಕಬೇಕಾದರೆ ಸಂಘಟಿತರಾಗಿ ಕಾರ್ಖಾನೆಗಳು ಮತ್ತು ರೈತರ ನಡುವಿನ ಬಾಂಧವ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಗೇರು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಎಂ.ಜಿ. ನಾಯಕ್ ವಿಜ್ಞಾನಿ ಡಾ.ಮೋಹನ್ ತಲಕಾಲಕೊಪ್ಪ ಮಾತನಾಡಿದರು. ನಿಟ್ಟೆ ಟ್ರಸ್ಟ್ ನ ಅಧ್ಯಕ್ಷ ಶ್ರೀನಾಥ್‌ನಾಯಕ್, ಹಿರಿಯ ಗೇರುಕೃಷಿಕರಾದ ಚಂದ್ರಶೇಖರ್ ಹುಮರಿ, ಪಂಡಿಮಂಜುನಾಥ್, ಸುಬ್ರಹ್ಮಣ್ಯ ನಿಟ್ಟೆ ಮತ್ತಿತರರು ಇದ್ದರು.

# ರೈತರು ಬೆಳೆ ಸಂಸ್ಕರಣೆ ಕಲಿಯಬೇಕಿದೆ



ನೀಚಡಿಯಲ್ಲಿ ನಡೆದ ಗೇರು ಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರವನ್ನು ದೇವಿಪ್ರಸಾದ್ ಕಲ್ಲಾಜೆ ಉದ್ಘಾಟಿಸಿದರು.

ತ್ಯಾಗರ್ತಿ: ಬೆಳೆಯನ್ನು ಸಂಸ್ಕರಣೆ ಮತ್ತು ಮಾರಾಟ ಮಾಡುವುದನ್ನು ರೈತರು ಅರಿತರೆ ಯಶಸ್ವಿಯಾಗಿ ಕೃಷಿ ಕ್ಷೇತ್ರದಲ್ಲಿ ಮುಂದುವರಿಯಬಹುದು ಎಂದು ಅಖಿಲ ಭಾರತ ಗೇರುಬೆಳೆಗಾರರ ಸಂಘದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ ಹೇಳಿದರು.

ನೀಚಡಿಯಲ್ಲಿ ಶುಕ್ರವಾರ ರಾಷ್ಟ್ರೀಯ ಗೇರುಸಂಶೋಧನಾ ಕೇಂದ್ರ ಪುತ್ತೂರು, ಗೇರು ಮತ್ತು ಕೋಕೋ ನಿರ್ದೇಶನಾಲಯ ಕೊಚ್ಚಿನ್ ಹಾಗೂ ನೀಚಡಿ ಟ್ರಸ್ಟ್ ಇವರ ಸಹಯೋಗದಲ್ಲಿ ಗೇರುಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ತೋಟಗಾರಿಕೆಗೆ ಸರ್ಕಾರ ಅನೇಕ ಸಹಾಯಧನಗಳನ್ನು ನೀಡುತ್ತಿದ್ದು ಸೂಕ್ತ ಮಾಹಿತಿಗಳು ಇಂತಹ ಕಾರ್ಯಾಗಾರಗಳಿಂದ ದೊರಕುತ್ತದೆ. ಇದರಿಂದ ವಿವಿಧ ಭಾಗದ ರೈತರ ಹಾಗೂ ವಿಜ್ಞಾನಿಗಳ ನಡುವೆ ಉತ್ತಮ ಬಾಂಧವ್ಯ ಹೊಂದಿ ಖುಷ್ಕಿ ಜಮೀನಿನಲ್ಲಿ ಬೆಳೆದ ಹಣ್ಣು ಮತ್ತು ಗೋಡಂಬಿಗಳನ್ನು ಸಂಸ್ಕರಣೆ ಮಾಡುವ ವಿಧಾನವನ್ನು ತಿಳಿದುಕೊಳ್ಳಬಹುದಾಗಿದೆ. ಅಲ್ಲದೇ ರೈತರು ಬೆಳೆದ ಉತ್ಪನ್ನಗಳಿಗೆ ಸಮರ್ಪಕ ಬೆಲೆ ದೊರಕಬೇಕಾದರೆ ಸಂಘಟಿತರಾಗಿ ಕಾರ್ಖಾನೆಗಳು ಮತ್ತು ರೈತರ ನಡುವಿನ ಬಾಂಧವ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಗೇರು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಎಂ.ಜಿ. ನಾಯಕ್ ವಿಜ್ಞಾನಿ ಡಾ.ಮೋಹನ್ ತಲಕಾಲಕೊಪ್ಪ ಮಾತನಾಡಿದರು. ನೀಚಡಿ ಟ್ರಸ್ಟ್ ನ ಅಧ್ಯಕ್ಷ ಶ್ರೀನಾಥ್‌ನಾಡಿಗ್, ಹಿರಿಯ ಗೇರುಕೃಷಿಕರಾದ ಚಂದ್ರಶೇಖರ್ ತುಮರಿ, ಶುಂಠಿಮಂಜುನಾಥ್, ಸುಬ್ರಹ್ಮಣ್ಯ ನೀಚಡಿ ಮತ್ತಿತರರು ಇದ್ದರು.

# ರೈತರಿಗೆ ಬೆಳೆಯ ಸಂಸ್ಕರಣೆ, ಮಾರಾಟ ಜ್ಞಾನ ಅಗತ್ಯ: ದೇವಿಪ್ರಸಾದ್ ಕಲ್ಲಾಜೆ

## ಗೇರುಕೃಷಿ– ಸಂಸ್ಕರಣಾ ತರಬೇತಿ ಕಾರ್ಯಾಗಾರ ಉದ್ಘಾಟಿಸಿದ ಸಂಘದ ಕಾರ್ಯದರ್ಶಿ

• **ಕನ್ನಡಪ್ರಭ ವಾರ್ತೆ**, ತ್ಯಾಗರ್ತಿ

ಬೆಳೆದ ಬೆಳೆಗಳನ್ನು ಸಂಸ್ಕರಣೆ ಮತ್ತು ಮಾರಾಟ ಮಾಡುವುದನ್ನು ರೈತರು ಅರಿತರೆ ಯಶಸ್ವಿಯಾಗಿ ರೈತಾಪಿ ಕ್ಷೇತ್ರದಲ್ಲಿ ಮುಂದುವರಿಯಬಹುದು ಎಂದು ಅಖಿಲ ಭಾರತ ಗೇರುಬೆಳೆಗಾರರ ಸಂಘದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ ಹೇಳಿದರು.

ಸಾಗರ ತಾಲೂಕು ನೀಚಡಿಯಲ್ಲಿ ಶುಕ್ರವಾರ ರಾಷ್ಟ್ರೀಯ ಗೇರುಸಂಶೋಧನಾ ಕೇಂದ್ರ ಪುತ್ತೂರು, ಗೇರು ಮತ್ತು ಕೋಕೋ ನಿರ್ದೇಶನಾಲಯ ಕೊಚ್ಚಿನ್ ಹಾಗೂ ನೀಚಡಿ ಟ್ರಸ್ಟ್ ಇವರ ಸಹಯೋಗದಲ್ಲಿ 2 ದಿನಗಳ ಗೇರುಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ತೋಟಗಾರಿಕೆಗೆ ಸರ್ಕಾರ ಅನೇಕ ಸಹಾಯಧನಗಳನ್ನು ನೀಡುತ್ತಿದ್ದು ಸೂಕ್ತ ಮಾಹಿತಿಗಳು ಇಂತಹ ಕಾರ್ಯಾಗಾರಗಳಿಂದ ದೊರಕುತ್ತವೆ. ಇದರಿಂದ ವಿವಿಧ ಭಾಗದ ರೈತರ ಹಾಗೂ ವಿಜ್ಞಾನಿಗಳ ನಡುವೆ ಉತ್ತಮ ಬಾಂಧವ್ಯ ಹೊಂದಿ ಖುಷ್ಕಿ ಜಮೀನಿನಲ್ಲಿ ಬೆಳೆದ ಹಣ್ಣು ಮತ್ತು ಗೋಡಂಬಿಗಳನ್ನು ಸಂಸ್ಕರಣೆ ಮಾಡುವ ವಿಧಾನವನ್ನು ತಿಳಿದುಕೊಳ್ಳಬಹುದಾಗಿದೆ. ಅಲ್ಲದೇ ರೈತರು ಬೆಳೆದ ಉತ್ಪನ್ನಗಳಿಗೆ ಸಮರ್ಪಕ ಬೆಲೆ ದೊರಕಬೇಕಾದರೆ ಸಂಘಟಿತರಾಗಿ ಕಾರ್ಖಾನೆಗಳು ಮತ್ತು ರೈತರ ನಡುವಿನ ಬಾಂಧವ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಕರೆ ನೀಡಿದರು.

ಗೇರುಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ.ಎಮ್.ಜಿ.ನಾಯಕ್ ಮಾತನಾಡಿ, ರೈತರು ಆಧುನಿಕತೆಗೆ ಹೊಂದಿಕೊಳ್ಳಲು ಕೃಷಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಕಳೆದ 3 ವರ್ಷಗಳಿಂದ ಗೇರು ತಳಿಗಳಲ್ಲಿ ಹಾಗೂ ಬೇಸಾಯ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು ಬೆಳೆದ ಬೆಳೆಗಳಿಗೆ ಹೆಚ್ಚಿನ ಆದಾಯ ಸಿಗುವಂತಾಗಲು ರೈತರು ಸಂಘಟನಾತ್ಮಕ ಚಟುವಟಿಕೆಯಲ್ಲಿ ತೊಡಗಿಕೊಂಡಿರಬೇಕು ಎಂದು ಹೇಳಿದರು.



ಸಾಗರ ತಾಲೂಕು ನೀಚಡಿಯಲ್ಲಿ ಆಯೋಜಿಸಿದ್ದ ಗೇರು ಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರ ಅಖಿಲ ಭಾರತ ಗೇರುಬೆಳೆಗಾರರ ಸಂಘದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ ಉದ್ಘಾಟಿಸಿದರು. ಅಧ್ಯಕ್ಷ ಶ್ರೀನಾಥ್‌ನಾಡಿಗ್, ಗೇರುಕೃಷಿಕ ಚಂದ್ರಶೇಖರ್ ತುಮರಿ ಇದ್ದರು.

ಗೇರುಸಂಶೋಧನಾ ಕೇಂದ್ರದ ವಿಜ್ಞಾನಿ ಡಾ.ಮೋಹನ್ ತಲಕಾಲಕೊಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ ಗೇರು ಸಂಶೋಧನಾ ಕೇಂದ್ರದಿಂದ ಇದುವರೆಗೂ ಯಾವುದೇ ತರಬೇತಿ, ಕಾರ್ಯಾಗಾರಗಳನ್ನು ನಡೆಸಿರುವುದಿಲ್ಲ. ಆದರೆ ಸಾಗರ ತಾಲೂಕಿನ ನೀಚಡಿ, ಉಳ್ಳೂರು, ತ್ಯಾಗರ್ತಿ, ಹೊಸಂತೆ , ನಂದೀತಳೆ ಗ್ರಾಮಗಳಲ್ಲಿನ ಯುವಕರ ಉತ್ಸಾಹ ಕಂಡು ಹೆಚ್ಚಿನ ಆದಾಯಗಳಿಸಲು ಈ ಗ್ರಾಮದಲ್ಲಿ ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಹಾಗೂ ನಮ್ಮ ಗೇರು ಸಂಶೋಧನಾ ಕೇಂದ್ರದ ಮಾರ್ಗದರ್ಶನದಲ್ಲಿ ವ್ಯವಸ್ಥಿತವಾಗಿ ಅತೀಸಾಂಧ್ರ ಪದ್ಧತಿಯ ಗೇರುಬೇಸಾಯವನ್ನು ನೆಡೆಸಲಾಗುತ್ತಿದ್ದು ಎರಡೇ ವರ್ಷದಲ್ಲಿ ಅತಿಹೆಚ್ಚು ಇಳುವರಿ ಕಂಡುಬಂದಿದೆ. ಇದರಿಂದ ಗಿಡನೆಟ್ಟು 8 ತಿಂಗಳಿಗೆ ಬೆಳೆ ಬಂದಿರುವುದು ಇಲ್ಲಿನ ಕೃಷಿಕರಲ್ಲಿ ಅಚ್ಚರಿಯನ್ನು ಮೂಡಿಸಿದೆ ಎಂದು ಹೇಳಿದರು.

ತರಬೇತಿಯಲ್ಲಿ ಗೇರು ತಳಿಗಳು ಮತ್ತು ತೋಟದ ನಿರ್ವಹಣೆ, ಪೋಷಕಾಂಶಗಳ ನಿರ್ವಹಣೆ , ಗೇರಿನಲ್ಲಿ ಕೀಟ ಹಾಗೂ ರೋಗನಿರ್ವಹಣೆ ಕುರಿತಾಗಿ ಉಪನ್ಯಾಸ ನೀಡಲಾಯಿತು. ಈ ಸಂದರ್ಭದಲ್ಲಿ ನೀಚಡಿ ಟ್ರಸ್ಟ್ ನ ಅಧ್ಯಕ್ಷ ಶ್ರೀನಾಥ್‌ನಾಡಿಗ್, ಹಿರಿಯ ಗೇರುಕೃಷಿಕರಾದ ಚಂದ್ರಶೇಖರ್ ತುಮರಿ, ಶುಂಠಿ ಮಂಜುನಾಥ್, ಸುಬ್ರಹ್ಮಣ್ಯ ನೀಚಡಿ ಮತ್ತಿತರರು ಇದ್ದರು.

## ಗೇರು ಬೆಳೆಗಾರರ ಸಂಘದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ

# ಬೆಳೆಗಳ ಸಂಸ್ಕರಣೆ ಮತ್ತು ಮಾರಾಟ ಅರಿಯಿರಿ

**ತ್ಯಾಗರ್ತಿ :** ಬೆಳೆದ ಬೆಳೆಗಳನ್ನು ಸಂಸ್ಕರಣೆ ಮತ್ತು ಮಾರಾಟ ಮಾಡುವುದನ್ನು ರೈತರು ಅರಿತರೆ ಯಶಸ್ವಿಯಾಗಿ ರೈತಾಪಿ ಕ್ಷೇತ್ರದಲ್ಲಿ ಮುಂದುವರಿಯಬಹುದು ಎಂದು ಅಖಿಲ ಭಾರತ ಗೇರುಬೆಳೆಗಾರರ ಸಂಘದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ ಹೇಳಿದರು.

ನೀಚಡಿಯಲ್ಲಿ ಶುಕ್ರವಾರ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ ಪುತ್ತೂರು, ಗೇರು ಮತ್ತು ಕೋಕೋ ನಿರ್ದೇಶನಾಲಯ ಕೊಚ್ಚಿನ್ ಹಾಗೂ ನೀಚಡಿ ಟ್ರಸ್ಟ್ ಇವರ ಸಹಯೋಗದಲ್ಲಿ 2 ದಿನಗಳ ಗೇರುಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತೋಟಗಾರಿಕೆಗೆ ಸರ್ಕಾರ ಅನೇಕ ಸಹಾಯಧನಗಳನ್ನು ನೀಡುತ್ತಿದ್ದು ಸೂಕ್ತ ಮಾಹಿತಿಗಳು ಇಂತಹ ಕಾರ್ಯಾಗಾರಗಳಿಂದ ದೊರಕುತ್ತದೆ. ಇದರಿಂದ ವಿವಿಧ ಭಾಗದ ರೈತರ ಹಾಗೂ ವಿಜ್ಞಾನಿಗಳ ನಡುವೆ ಉತ್ತಮ ಬಾಂಧವ್ಯ ಹೊಂದಿ ಖುಷ್ಕಿ ಜಮೀನಿನಲ್ಲಿ ಬೆಳೆದ ಹಣ್ಣು ಮತ್ತು ಗೋಡಂಬಿಗಳನ್ನು ಸಂಸ್ಕರಣೆ ಮಾಡುವ ವಿಧಾನವನ್ನು ತಿಳಿದುಕೊಳ್ಳಬಹುದಾಗಿದೆ. ಅಲ್ಲದೇ ರೈತರು ಬೆಳೆದ ಉತ್ಪನ್ನಗಳಿಗೆ ಸಮರ್ಪಕ ಬೆಲೆ ದೊರಕಬೇಕಾದರೆ ಸಂಘಟಿತರಾಗಿ ಕಾರ್ಖಾನೆಗಳು ಮತ್ತು ರೈತರ ನಡುವಿನ ಬಾಂಧವ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಗೇರು ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ.ಎಂ.ಜೆ.ನಾಯಕ್ ಮಾತನಾಡಿ, ರೈತರು ... ಬದಲಾವಣೆ




ಬಂಜರು ಭೂಮಿಯಲ್ಲಿ ಗೋಡಂಬಿ ಬೆಳೆ ಬೆಳೆಯುವುದು ಉತ್ತಮ ವಿಧಾನವಾಗಿದೆ. ನೀರಿಲ್ಲದ ಒಣ ಭೂಮಿಗಳಲ್ಲೂ ರೈತರು ಉತ್ತಮ ಆದಾಯ ಪಡೆಯಬಹುದಾಗಿದೆ.

■ ಚಂದ್ರಶೇಖರ್, ಹಿರಿಯ ಗೇರು ಕೃಷಿಕ.

ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು ಬೆಳೆದ ...

ಎಂದು ಹೇಳಿದರು.

ಗೇರುಸಂಶೋಧನಾ ಕೇಂದ್ರದ ವಿಜ್ಞಾನಿ ಡಾ.ಮೋಹನ್ ತಲಕಾಲಕೊಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ತರಬೇತಿಯಲ್ಲಿ ಗೇರು ತಳಿಗಳು ಮತ್ತು ತೋಟದ ನಿರ್ವಹಣೆ, ಪೋಷಕಾಂಶಗಳ ನಿರ್ವಹಣೆ , ಗೇರಿನಲ್ಲಿ ಕೀಟ ಹಾಗೂ ರೋಗನಿರ್ವಹಣೆ ಕುರಿತಾಗಿ ಉಪನ್ಯಾಸ ನೀಡಲಾಯಿತು. ಈ ಸಂದರ್ಭದಲ್ಲಿ ನೀಚಡಿ ಟ್ರಸ್ಟ್‌ನ ಅಧ್ಯಕ್ಷ ಶ್ರೀನಾಥ್ ನಾಡಿಗ್, ಹಿರಿಯ ಗೇರು ಕೃಷಿಕರಾದ ...

### ಗೇರು ಕೃಷಿ ತರಬೇತಿ ಕಾರ್ಯಾಗಾರ ಉದ್ಘಾಟಿಸಿದ ದೇವಿಪ್ರಸಾದ್ ಕಲ್ಲಾಜೆ ಅಭಿಮತ

# ಸಂಸ್ಕರಣೆ, ಮಾರಾಟ ಅರಿತರೆ ಸಕ್ಸಸ್

■ **ವಿಕ ಸುದ್ದಿಲೋಕ** ತ್ಯಾಗರ್ತಿ

ಬೆಳೆಗಳ ಸಂಸ್ಕರಣೆ ಮತ್ತು ಮಾರಾಟ ಮಾಡುವುದನ್ನು ಅರಿತರೆ ಯಶಸ್ವಿಯಾಗಿ ರೈತಾಪಿ ಕ್ಷೇತ್ರದಲ್ಲಿ ಮುಂದುವರಿಯಬಹುದು ಎಂದು ಅಖಿಲ ಭಾರತ ಗೇರುಬೆಳೆಗಾರರ ಸಂಘದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ ಹೇಳಿದರು.

ಸಾಗರ ತಾಲೂಕು ನೀಚಡಿಯಲ್ಲಿ ಶುಕ್ರವಾರ ರಾಷ್ಟ್ರೀಯ ಗೇರುಸಂಶೋಧನಾ ಕೇಂದ್ರ ಪುತ್ತೂರು, ಗೇರು ಮತ್ತು ಕೋಕೋ ನಿರ್ದೇಶನಾಲಯ ಕೊಚ್ಚಿನ್ ಹಾಗೂ ನೀಚಡಿ ಟ್ರಸ್ಟ್ ಸಹಯೋಗದಲ್ಲಿ 2 ದಿನಗಳ ಗೇರುಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ತೋಟಗಾರಿಕೆಗೆ ಸರಕಾರ ಅನೇಕ ಸಹಾಯಧನ ನೀಡುತ್ತಿದ್ದು, ಇಂತಹ ಕಾರ್ಯಾಗಾರಗಳಿಂದ ಸೂಕ್ತ ಮಾಹಿತಿ ದೊರಕುತ್ತದೆ. ಇದರಿಂದ ವಿವಿಧ ಭಾಗದ ರೈತರ ಹಾಗೂ ವಿಜ್ಞಾನಿಗಳ ನಡುವೆ ಉತ್ತಮ ಬಾಂಧವ್ಯ ಹೊಂದಿ ಖುಷ್ಕಿ ಜಮೀನಲ್ಲಿ ಬೆಳೆದ ಹಣ್ಣು ಮತ್ತು ಗೋಡಂಬಿಗಳನ್ನು ಸಂಸ್ಕರಣೆ ಮಾಡುವ ವಿಧಾನ ತಿಳಿಯಬಹುದು. ಅಲ್ಲದೇ ರೈತರು ಬೆಳೆದ ಉತ್ಪನ್ನಗಳಿಗೆ ಸಮರ್ಪಕ ಬೆಲೆ ದೊರಕಬೇಕಾದರೆ ಸಂಘಟಿತರಾಗಿ ಕಾರ್ಖಾನೆಗಳು ಮತ್ತು ರೈತರ ನಡುವಿನ ಬಾಂಧವ್ಯ ಹೆಚ್ಚಿಸಿಕೊಳ್ಳಬೇಕೆಂದರು.

ಗೇರು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಎಂ.ಜಿ. ನಾಯಕ್ ಮಾತನಾಡಿ, ರೈತರು ಆಧುನಿಕತೆಗೆ ಹೊಂದಿ ಕೊಳ್ಳಲು ಕೃಷಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದು ಅನಿವಾರ್ಯ. 3 ವರ್ಷಗಳಿಂದ ಗೇರು ತಳಿ ಹಾಗೂ ಬೇಸಾಯ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿದೆ. ಬೆಳೆಗಳಿಗೆ ಹೆಚ್ಚಿನ ಆದಾಯ ಸಿಗುವಂತಾಗಲು ರೈತರು ಸಂಘಟನಾತ್ಮಕ ಚಟುವಟಿಕೆಯಲ್ಲಿ ತೊಡಗಿರಬೇಕೆಂದರು.

ಗೇರುಸಂಶೋಧನಾ ಕೇಂದ್ರದ ವಿಜ್ಞಾನಿ ಡಾ.ಮೋಹನ್ ತಲಕಾಲಕೊಪ್ಪ ಪ್ರಾಸ್ತಾವಿಕ ಮಾತನಾಡಿ, ಗೇರು ಸಂಶೋಧನಾ ಕೇಂದ್ರದ ಮಾರ್ಗದರ್ಶನದಲ್ಲಿ ವ್ಯವಸ್ಥಿತವಾಗಿ ಅತಿ ಸಾಂಧ್ರ ಪದ್ಧತಿಯ ಗೇರುಬೇಸಾಯ ನಡೆಸಲಾಗುತ್ತಿದೆ. ಎರಡೇ ವರ್ಷದಲ್ಲಿ ಅತಿಹೆಚ್ಚು ಇಳುವರಿ ಕಂಡುಬಂದಿದೆ. ಇದರಿಂದ ಗಿಡನೆಟ್ಟು 8 ತಿಂಗಳಿಗೆ ಬೆಳೆ ಬಂದಿರುವುದು ಇಲ್ಲಿನ ಕೃಷಿಕರಲ್ಲಿ ಅಚ್ಚರಿ ಮೂಡಿಸಿದೆ ಎಂದರು.

ತರಬೇತಿಯಲ್ಲಿ ಗೇರು ತಳಿಗಳು ಮತ್ತು ತೋಟದ ನಿರ್ವಹಣೆ, ಪೋಷಕಾಂಶ ನಿರ್ವಹಣೆ , ಗೇರಿನಲ್ಲಿ ಕೀಟ ಹಾಗೂ ರೋಗನಿರ್ವಹಣೆ ಕುರಿತು ಉಪನ್ಯಾಸ ನೀಡಲಾಯಿತು. ಈ ಸಂದರ್ಭ ನೀಚಡಿ ಟ್ರಸ್ಟ್ ಅಧ್ಯಕ್ಷ ಶ್ರೀನಾಥ್ ನಾಡಿಗ್, ಹಿರಿಯ ಗೇರುಕೃಷಿಕರಾದ ಚಂದ್ರಶೇಖರ್ ತುಮರಿ, ಕುಂಠಿಮಂಜುನಾಥ್, ಸುಬ್ರಹ್ಮಣ್ಯ ನೀಚಡಿ ಮತ್ತಿತರರು ಇದ್ದರು.



ನೀಚಡಿಯಲ್ಲಿ ಏರ್ಪಡಿಸಿದ್ದ ಗೇರು ಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರವನ್ನು ಅಖಿಲ ಭಾರತ ಗೇರುಬೆಳೆಗಾರರ ಸಂಘದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ ಉದ್ಘಾಟಿಸಿದರು.

> ಬಂಜರು ಭೂಮಿಯಲ್ಲಿ ಗೋಡಂಬಿ ಬೆಳೆ ಬೆಳೆಯುವುದು ಉತ್ತಮ ವಿಧಾನ. ನೀರಿಲ್ಲದ ಒಣ ಭೂಮಿಗಳಲ್ಲೂ ರೈತರು ಉತ್ತಮ ಆದಾಯ ಪಡೆಯಬಹುದು.
>
> **-ಚಂದ್ರಶೇಖರ್**, ಹಿರಿಯ ಗೇರು ಕೃಷಿಕ

ತರಬೇತಿ ಕಾರ್ಯಾಗಾರ

# ಕೃಷಿಯಲ್ಲಿ ಆಧುನಿಕತೆ ಅಗತ್ಯ

## ■ ರೈತರ ಬೆಳೆಗೆ ಸಂಪೂರ್ಣ ಲಾಭ ಸಿಗಲಿ: ಡಾ| ಎಂ.ಜಿ. ನಾಯಕ್



ಸಾಗರ: ನೀಚಡಿಯಲ್ಲಿ ನಡೆಯುತ್ತಿರುವ ಗೇರು ಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರದಲ್ಲಿ ಗೇರು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ| ಎಂ.ಜಿ. ನಾಯಕ್ ಮಾತನಾಡಿದರು.

**ಸಾಗರ:** ಆಧುನಿಕತೆ ಎಂಬುದು ಎಲ್ಲ ಕ್ಷೇತ್ರಗಳಲ್ಲಿ ಶಾಪವಲ್ಲ, ಅದಕ್ಕೆ ಅದರದೇ ಆದ ಅನುಕೂಲಗಳೂ ಇವೆ. ರೈತರೂ ಸಹ ಆಧುನಿಕತೆಗೆ ಹೊಂದಿಕೊಳ್ಳಲು ಕೃಷಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದು ಪುತ್ತೂರಿನ ಗೇರು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ| ಎಂ.ಜಿ. ನಾಯಕ್ ಪ್ರತಿಪಾದಿಸಿದರು.

ತಾಲೂಕಿನ ನೀಚಡಿಯಲ್ಲಿ ಪುತ್ತೂರಿನ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ, ನೀಚಡಿ ಟ್ರಸ್ಟ್, ಕೊಚ್ಚಿನ್‌ನ ಗೇರು ಮತ್ತು ಕೋಕೋ ನಿರ್ದೇಶನಾಲಯಗಳ ಸಹಯೋಗದಲ್ಲಿ ಶುಕ್ರವಾರ ಆರಂಭವಾದ 2 ದಿನಗಳ ಗೇರುಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಳೆದ 3 ವರ್ಷಗಳಿಂದ ಗೇರು ತಳಿಗಳಲ್ಲಿ ವ್ಯಾಪಕ ಅಭಿವೃದ್ಧಿ ಮಾಡಲಾಗಿದೆ. ಅದಕ್ಕೆ ಪೂರಕವಾಗಿ ಬೇಸಾಯ ಪದ್ಧತಿಯಲ್ಲಿ ಕೂಡ ಸಾಕಷ್ಟು ಬದಲಾವಣೆಗಳಾಗಿವೆ. ರೈತರ ಶ್ರಮದ ಬೆಳೆಗಳಿಗೆ ಸಂಪೂರ್ಣ ಲಾಭ ಸಿಗಬೇಕು. ಈ ನಿಟ್ಟಿನಲ್ಲಿ ರೈತರು ಸಂಘಟನಾತ್ಮಕವಾಗಿ ಚಟುವಟಿಕೆಯಲ್ಲಿರಬೇಕು ಎಂದು ಹೇಳಿದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅಖಿಲ ಭಾರತ ಗೇರು ಬೆಳೆಗಾರರ ಸಂಘ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ, ರೈತರು ಬೆಳೆದ ಬೆಳೆಗಳನ್ನು ಸಂಸ್ಕರಣೆ ಮತ್ತು ಮಾರುಕಟ್ಟೆ ಮಾಡುವುದನ್ನು ಅರಿತರೆ ಯಶಸ್ವಿಯಾಗಿ ರೈತಾಪಿ ಕ್ಷೇತ್ರದಲ್ಲಿ ಮುಂದುವರಿಯಬಹುದು. ತೋಟಗಾರಿಕೆಗೆ ಸರ್ಕಾರ ಅನೇಕ ಸಹಾಯಧನಗಳನ್ನು ನೀಡುತ್ತಿದ್ದು ಅದನ್ನು ಪಡೆದುಕೊಳ್ಳಲು ರೈತರಿಗೆ ಸೂಕ್ತ ಮಾಹಿತಿಗಳು ಇಂತಹ ಕಾರ್ಯಾಗಾರಗಳಿಂದ ಸಾಧ್ಯವಾಗುತ್ತದೆ. ವಿವಿಧ ಭಾಗದ ರೈತರ ಹಾಗೂ ವಿಜ್ಞಾನಿಗಳ ನಡುವೆ ಉತ್ತಮ ಬಾಂಧವ್ಯ ಸಾಧ್ಯವಾಗುತ್ತದೆ ಎಂದರು.

ನಮ್ಮ ಜಮೀನಿನಲ್ಲಿ ಬೆಳೆದ ಹಣ್ಣು ಮತ್ತು ಗೋಡಂಬಿಗಳನ್ನು ಸಂಸ್ಕರಣೆ ಮಾಡುವ ವಿಧಾನವನ್ನು ನಾವು ತಿಳಿದುಕೊಂಡಿರಬೇಕು. ಕಾರ್ಖಾನೆಗಳು ಮತ್ತು ರೈತರ ನಡುವೆ ಅಂತರ ಇದೆ. ಅಂತರವನ್ನು ಕಡಿಮೆ ಮಾಡಲು ರೈತರು ಸಂಘಟಿತರಾಗಬೇಕು. ರೈತರು ಬೆಳೆದ ಉತ್ಪನ್ನಗಳಿಗೆ ಬೆಂಬಲ ಬೆಲೆಗಳು ಸಿಗಬೇಕು ಎಂದು ಹೇಳಿದರು.

ಗೇರು ಸಂಶೋಧನಾ ಕೇಂದ್ರದ ವಿಜ್ಞಾನಿ ಡಾ| ಮೋಹನ್ ತಲಕಾಲಕೊಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ತಾಲೂಕಿನ ನೀಚಡಿ, ಉಳ್ಳೂರು, ತ್ಯಾಗರ್ತಿ, ಹೊಸಂತೆ, ನಂದೀತಳೆ ಗ್ರಾಮಗಳಲ್ಲಿ ವ್ಯವಸ್ಥಿತ ಗೇರು ಕೃಷಿಯ ಅತೀಸಾಂದ್ರದ ಪದ್ಧತಿಯ ಗೇರು ಬೇಸಾಯವನ್ನು ನಮ್ಮ ಕೇಂದ್ರದ ಮಾರ್ಗದರ್ಶನದಲ್ಲಿ ನಡೆಸಲಾಗುತ್ತಿದ್ದು ಎರಡೇ ವರ್ಷದಲ್ಲಿ ಅತಿ ಹೆಚ್ಚು ಇಳುವರಿ ಗೇರು ಕೃಷಿಯಲ್ಲಿ ಕಂಡುಬಂದಿದೆ. ಇದರಲ್ಲಿ ಗಿಡ ನೆಟ್ಟು 8 ತಿಂಗಳಿಗೆ ಬೆಳೆ ಬಂದಿರುವುದು ಇಲ್ಲಿನ ಕೃಷಿಕರಲ್ಲಿ ಅಚ್ಚರಿ ಮೂಡಿಸಿದೆ ಎಂದು ಹೇಳಿದರು.

ತರಬೇತಿಯಲ್ಲಿ ಗೇರು ತಳಿಗಳು ಮತ್ತು ತೋಟದ ನಿರ್ವಹಣೆ ಪೋಷಕಾಂಶಗಳ ನಿರ್ವಹಣೆ, ಗೇರಿನಲ್ಲಿ ಕೀಟ ಹಾಗೂ ರೋಗನಿರ್ವಹಣೆ ಕುರಿತಾಗಿ ಉಪನ್ಯಾಸ ನೀಡಲಾಯಿತು. ನೀಚಡಿ ಟ್ರಸ್ಟ್‌ನ ಅಧ್ಯಕ್ಷ ಶ್ರೀನಾಥ್ ನಾಡಿಗ್, ಹಿರಿಯ ಗೇರು ಕೃಷಿಕರಾದ ಚಂದ್ರಶೇಖರ್ ತುಮರಿ, ಶುಂಠಿ ಮಂಜುನಾಥ್, ಸುಬ್ರಹ್ಮಣ್ಯ ನೀಚಡಿ ಮತ್ತಿತರರು ಇದ್ದರು.

# ಗೇರು ಉತ್ಪನ್ನ ಯುವಜನ ಉದ್ಯೋಗಕ್ಕೆ ಸಹಕಾರಿ

## ಗೇರು ಕೃಷಿ, ಸಂಸ್ಕರಣಾ ಕಾರ್ಯಾಗಾರದಲ್ಲಿ ಡಾ.ಎಂ.ಜಿ.ನಾಯಕ್ ಹೇಳಿಕೆ

■ ವಿಕ ಸುದ್ದಿಲೋಕ ತ್ಯಾಗರ್ತಿ

ಗೇರು ಉತ್ಪನ್ನದಿಂದ ಯುವಜನರು ಸ್ವ ಉದ್ಯೋಗವನ್ನು ಸೃಷ್ಟಿಸಿಕೊಳ್ಳಬಹುದೆಂದು ಗೇರು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಎಂ.ಜಿ.ನಾಯಕ್ ಹೇಳಿದರು.

ಸಾಗರ ತಾಲೂಕಿನ ನೀಚಡಿಯಲ್ಲಿ ಶನಿವಾರ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ ಪುತ್ತೂರು, ಗೇರು ಮತ್ತು ಕೋಕೋ ನಿರ್ದೇಶನಾಲಯ ಕೊಚ್ಚಿನ್ ಹಾಗೂ ನೀಚಡಿ ಟ್ರಸ್ಟ್ ಇವರ ಸಹಯೋಗದಲ್ಲಿ 2 ದಿನಗಳ ಗೇರು ಕೃಷಿ ಮತ್ತು ಸಂಸ್ಕರಣಾ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ವಿವಿಧ ಬಗೆಯ ಗೇರು ತಳಿಗಳ ಅಭಿವೃದ್ಧಿಯ ಸಂಶೋಧನೆ ನಡೆಯುತ್ತಿದ್ದು ಈ ಸಂಶೋಧನೆಯಲ್ಲಿ ಯಶಸ್ವಿಯಾದರೆ ಕಡಿಮೆ ವೆಚ್ಚದಲ್ಲಿ ಹೆಚ್ಚು ಇಳುವರಿ ನೀಡುವ ಗೇರು ತಳಿಗಳನ್ನು ರೈತರಿಗೆ ನೀಡಲಾಗುವುದು ಎಂದು ಹೇಳಿದರು.

ಗೇರು ತಳಿಗೆ ಶಾಪವೆಂಬಂತೆ ಹೂ ಬರುವ ಸಮಯದಲ್ಲಿ ಇಬ್ಬನಿ ಹೆಚ್ಚಾಗಿ ಹೂಗಳು ಕರಟಿಹೋಗಿ ಇಳುವರಿ ಕಡಿಮೆಯಾಗುತ್ತದೆ. ಇದರಿಂದ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ರೈತರ ಸಂಕಷ್ಟಕ್ಕೆ ಸಹಕಾರಿಯಾಗುವಂತಹ ಗೇರು ತಳಿಗಳನ್ನು ಸಂಶೋಧನಾ ಕೇಂದ್ರಗಳಲ್ಲಿ ಅಭಿವೃದ್ಧಿಪಡಿಸಬೇಕೆಂದು ಪ್ರಗತಿಪರ ಕೃಷಿಕ ಉಳ್ಳೂರು ಚಂದ್ರಶೇಖರ್ ಮನವಿ ಮಾಡಿದರು.

ಸಾಗರ ತಾಲೂಕಿನ ಆನಂದಪುರ ಸಮೀಪದ ಇರುವಕ್ಕಿ ಗ್ರಾಮದಲ್ಲಿ 780 ಎಕರೆ ಪ್ರದೇಶದಲ್ಲಿ ಕೃಷಿ ಸಂಶೋಧನಾ ಕೇಂದ್ರವು ಪ್ರಾರಂಭಗೊಳ್ಳುತ್ತಿದ್ದು ಈ ಸಂಶೋಧನಾ ಕೇಂದ್ರದಲ್ಲಿ ಗೇರು ಬೆಳೆ ಸಂಶೋಧನಾ ಕೇಂದ್ರಕ್ಕೂ ಅವಕಾಶ ದೊರಕಿಸಿಕೊಟ್ಟರೆ ಜಿಲ್ಲೆಯ ರೈತರಿಗೆ ಸಹಕಾರಿಯಾಗುತ್ತದೆ ಎಂದು ಹಿರೇಬಿಲಗುಂಜಿ ಗ್ರಾ.ಪಂ. ಸದಸ್ಯ ಹಾಗೂ ನೀಚಡಿ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀನಾಥ್ ನಾಡಿಗ್ ಹೇಳಿದರು.

ಬೆಳೆಗಾರರಿಗೆ ಸಹಕಾರಿಯಾಗುವಂತೆ ಗೇರು ತೋಟಗಳಿಗೆ ಬೇಟಿ ನೀಡಿ ಗಿಡಗಳ ನಾಟಿ, ಪಾಲನೆ, ಪೋಷಣೆ ಹಾಗೂ ರೋಗಗಳ ನಿಯಂತ್ರಣಗಳ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ನೀಡಿದ್ದು ಸ್ಥಳೀಯ ಹಾಗೂ ಸುತ್ತಮುತ್ತಲಿನ ಬೆಳೆಗಾರರು ಅತ್ಯುತ್ಸಾಹದಿಂದ ಈ ಮಾಹಿತಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದು ಈ ಪ್ರದೇಶಗಳಲ್ಲಿ ಅತೀ ಹೆಚ್ಚು ಗೇರು ಬೆಳೆ ಬೆಳೆದು ರೈತರು ಆರ್ಥಿಕವಾಗಿ ಸದೃಢರಾಗಲಿ ಎಂದು ಗೇರು ಸಂಶೋಧನಾ ಕೇಂದ್ರದ ವಿಜ್ಞಾನಿ ಡಾ.ಮೋಹನ್ ತಲಕಾಲುಕೊಪ್ಪ ಹೇಳಿದರು. ಎನ್.ಎಚ್. ಮಂಜುನಾಥ್ ನೀಚಡಿ ಉಪಸ್ಥಿತರಿದ್ದು ಎನ್.ಪಿ.ಸುಬ್ರಮಣ್ಯ ನಿರೂಪಿಸಿದರು.



ನೀಚಡಿಯಲ್ಲಿ ಗೇರು ಮಾಹಿತಿ ಕಾರ್ಯಾಗಾರದಲ್ಲಿ ಗೇರು ಉತ್ಪನ್ನಗಳ ಪ್ರಾತ್ಯಕ್ಷಿಕೆ ನಡೆಸಲಾಯಿತು.